# ಋಷಿಗಳು ತೋರಿಸಿಕೊಟ್ಟ ಆದರ್ಶ ಗೃಹಸ್ಥಧರ್ಮ

**ಸ್ವಾಮಿ ವೀರೇಶಾನಂದ**

ಭಾರತೀಯ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕತೆಯ ಮೊದಲ ಕಿರಣಗಳು ಮೂಡಿಬರುವುದು ವೈದಿಕ ಋಷಿಗಳಿಂದ. ಅವರು ಬಾಳಿದ, ತೋರಿಸಿಕೊಟ್ಟ ಆದರ್ಶಗಳು ಕೇವಲ ಅವರ ಕಾಲಕ್ಕಷ್ಟೇ ಅಲ್ಲ, ಎಲ್ಲ ಕಾಲದ ಸಮಾಜಕ್ಕೂ ಉನ್ನತ ಗುರಿಯನ್ನು ಹಾಗೂ ಸುಖ, ಶಾಂತಿ, ನೆಮ್ಮದಿಗಳನ್ನು ಹೊಂದಲು ಉಪಯುಕ್ತವಾಗಿವೆ. ಈ ಬಗ್ಗೆ ಇಲ್ಲಿ ಬರೆದಿರುವ ಪೂಜ್ಯ ಸ್ವಾಮೀಜಿಯವರು **'ವಿವೇಕ ಪ್ರಭ'** ಪತ್ರಿಕೆಯ ಹಿಂದಿನ ಸಂಪಾದಕರಾಗಿದ್ದರು. ಉತ್ತಮ ವಾಗ್ಮಿಗಳೂ, ಸಂಸ್ಕೃತ ವಿದ್ವಾಂಸರೂ ಆಗಿರುವ ಅವರು ಈ ಪತ್ರಿಕೆಯಲ್ಲಿ ನಿಯತವಾಗಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ. ಪ್ರಸ್ತುತ ಆಸ್ಟ್ರೇಲಿಯಾದ ವೇದಾಂತ ಸೆಂಟರ್ ಆಫ್ ಸಿಡ್ನಿಯ ಶಾಖಾಕೇಂದ್ರವಾಗಿರುವ ಅಡಿಲೇಡ್‌ನ ವೇದಾಂತ ಕೇಂದ್ರದಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದಾರೆ.

**ಇದಂ ನಮ ಋಷಿಭ್ಯಃ ಪೂರ್ವಜೇಭ್ಯಃ**
**ಪೂರ್ವೇಭ್ಯಃ ಪಥಿಕೃದ್ಭ್ಯಃ ॥**

*(ಋಗ್ವೇದ ೧೦.೧೪.೧೫)*

'ನಮಗೆ ಜೀವನಮಾರ್ಗವನ್ನು ತೋರಿಸಿಕೊಟ್ಟ ಪುರಾತನರೂ, ಹಿಂದಿನಕಾಲದಲ್ಲಿ ಹುಟ್ಟಿದವರೂ ಆದ ಋಷಿಗಳಿಗೆ ನನ್ನ ಈ ನಮಸ್ಕಾರಗಳು' ಎಂದು ಋಗ್ವೇದ ಹೇಳುತ್ತದೆ.

ಈ ಲೇಖನದ ಶೀರ್ಷಿಕೆಯಲ್ಲಿ ಮೂರು ಅಂಶಗಳು ಅಡಕವಾಗಿವೆ. ಋಷಿಗಳು, ಗೃಹಸ್ಥಧರ್ಮ ಮತ್ತು ಋಷಿಗಳು ನಮಗೆ ಉಪದೇಶಿಸಿದ ಗೃಹಸ್ಥಧರ್ಮ. ಹೀಗಾಗಿ ನಮ್ಮ ಈ ವಿಷಯವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡೋಣ.

### ಋಷಿಗಳು ಎಂದರೆ ಯಾರು?

'ಋಷಿ' ಎಂಬ ಪದವು ಸಂಸ್ಕೃತದ 'ಋಷ್' ಧಾತುವಿನಿಂದ ಬಂದಿದೆ. ಇದರ ಅರ್ಥ, 'ಹೋಗುವುದು, ಸಂಚರಿಸುವುದು' ಎಂದು. ಇದಲ್ಲದೆ ಈ ಧಾತುವಿಗೆ ಇನ್ನೊಂದು ಅರ್ಥವೂ ಇದೆ ಎಂದು ವ್ಯಾಕರಣಶಾಸ್ತ್ರಜ್ಞರು ಹೇಳುತ್ತಾರೆ. 'ಹರಿಯುವುದು, ಹರಿಯುತ್ತ ಹತ್ತಿರ ಹೋಗುವುದು' ಎನ್ನುವುದೇ ಆ ಅರ್ಥ. ಸಂಸ್ಕೃತದಲ್ಲಿ ಪ್ರಸಿದ್ಧ ಸಂಸ್ಕೃತ-ಇಂಗ್ಲಿಷ್ ನಿಘಂಟುಗಳನ್ನು ರಚಿಸಿದ ವಿ.ಎಸ್. ಆಪ್ಟೆ ಮತ್ತು ಮೊನಿಯರ್ ವಿಲಿಯಮ್ಸ್ - ಇಬ್ಬರೂ ಸರಿಸುಮಾರು ಇದೇ ಅರ್ಥವನ್ನು ನೀಡಿದ್ದಾರೆ. ತಾರಾನಾಥನೆಂಬ ಪಂಡಿತನು **'ಋಷತಿ ಜ್ಞಾನೇನ ಸಂಸಾರ ಪಾರಮ್ ಇತಿ ಋಷಿಃ'** — ಆತ್ಮಜ್ಞಾನದ ಮೂಲಕ ಸಂಸಾರಸಾಗರವನ್ನು ದಾಟಿಸುವುದರಿಂದ ಒಬ್ಬನು ಋಷಿ ಎನ್ನಿಸಿಕೊಳ್ಳುತ್ತಾನೆ ಎಂದು ಹೇಳುತ್ತಾನೆ. **'ಋಷಿಃ ಕ್ರಾಂತದರ್ಶಿ'** — 'ಸಾಮಾನ್ಯರ ನೋಟದ ಆಚೆಗೆ ನೋಡುವವನು' ಎಂದೂ ಕೂಡ ಋಷಿ ಶಬ್ದಕ್ಕೆ ಅರ್ಥ ಮಾಡಬಹುದು. ಋಷಿ ಪದವು ಬಹಳ ಹಳೆಯ ಕಾಲದ ಗ್ರಂಥಗಳಾದ ಜೈಮಿನೀಯ ಬ್ರಾಹ್ಮಣ ಮತ್ತು ಬೃಹದಾರಣ್ಯಕ ಉಪನಿಷತ್ತುಗಳಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತದೆ.

ಋಷಿಗಳೆಂದರೆ ಮಂತ್ರದ್ರಷ್ಟಾರರು. ಅವರು ವೈದಿಕ ಮಂತ್ರಗಳನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವವರು ಎಂದು ಇದರ



ಅರ್ಥ. ಅವರು ಮಂತ್ರಗಳನ್ನು ತಮ್ಮ ಆಂತರಿಕ ಧ್ಯಾನದಲ್ಲಿ ಕಾಣಬಲ್ಲ ಬೆಳಕನ್ನು ಕಂಡುಕೊಂಡವರು. ಆಧುನಿಕ ಕಾಲದ ಮಹರ್ಷಿಗಳಾದ ಶ್ರೀಅರವಿಂದರು ಋಷಿ ಮತ್ತು ಮಂತ್ರದ ಬಗ್ಗೆ ಹೀಗೆ ಹೇಳುತ್ತಾರೆ: ''ಋಷಿಯು ಒಂದು ಆಂತರಿಕ ಸತ್ಯವನ್ನು ಕಂಡುಕೊಂಡಿರುತ್ತಾನೆ ಅಥವಾ ಅನ್ವೇಷಣ ಮಾಡಿರುತ್ತಾನೆ. ಹಾಗೂ ಅದನ್ನು ಪ್ರಭಾವಕಾರಿಯಾದ ಭಾಷೆಯಲ್ಲಿ ಇದನ್ನು ವ್ಯಕ್ತಪಡಿಸುತ್ತಾನೆ. ಅದನ್ನೇ ಮಂತ್ರ ಎಂದು ಹೇಳುವುದು.'' ಅವರು ಹೇಳುವಂತೆ, ಋಷಿಯೆನ್ನುವವನು ಕೆಲವು ವೈದಿಕ ಸ್ತೋತ್ರಗಳ ರಚನೆಕಾರನಲ್ಲ, ಅದಕ್ಕೆ ಬದಲಾಗಿ ನಿತ್ಯಸತ್ಯವನ್ನು ಮತ್ತು ಅಮೂರ್ತ ಜ್ಞಾನವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವವನು.

ಋಷಿಯಾದವನು ಬರಿಯ ದ್ರಷ್ಟಾರನಲ್ಲ, ಶ್ರೋತಾರನೂ ಹೌದು. ಆತನು ದಿವ್ಯ ವಚನವನ್ನು ಆಲಿಸುವ ಅತೀಂದ್ರಿಯ ಶಕ್ತಿಯನ್ನು ಗಳಿಸಿಕೊಂಡಿದ್ದನು. ಆ ದಿವ್ಯವಚನವು ಅನಂತದಿಂದ ಹೊಮ್ಮಿಬಂದ ಶಬ್ದಸ್ಪಂದನವಾಗಿತ್ತು. ಹೀಗಾಗಿ ಅವನು ಕ್ರಾಂತದರ್ಶಿ ಮಾತ್ರವಲ್ಲ, ಸತ್ಯಶ್ರುತನೂ ಹೌದು.

ಋಷಿಗಳು ಮಹಾನ್ ಆಧ್ಯಾತ್ಮಿಕ ಮತ್ತು ಅತೀಂದ್ರಿಯ ಶಕ್ತಿ ಸಂಪನ್ನರಾಗಿದ್ದರು. ಅವರು ತಮ್ಮ ಧ್ಯಾನಸ್ಥಿತಿಯಲ್ಲಿ ಹಲವಾರು ಬಗೆಯ ಪ್ರತೀಕಗಳನ್ನು, ಸಂಕೇತಗಳನ್ನು ಕಾಣುತ್ತಿದ್ದರು. ಇಂಥ ಅನುಭಗಳನ್ನು ಅವರು ಮಂತ್ರಗಳ ರೂಪದಲ್ಲಿ ಹೊರಜಗತ್ತಿನ ಮುಂದೆ ಇಡುತ್ತಿದ್ದರು. ಹೀಗಾಗಿ ಆಂತರಿಕ ಅನುಭವ ಮತ್ತು ಅದರ ಬಾಹ್ಯರೂಪವಾದ ಮಂತ್ರ — ಇವೆರಡರ ಹಕ್ಕುದಾರರಾಗಿದ್ದರು, ಈ ಋಷಿಗಳು.

ನಿರುಕ್ತವೆಂಬುದು ವೇದಕಾಲದ ನಿಘಂಟು. ಇದರ ರಚನೆಕಾರ ಯಾಸ್ಕ ಮಹರ್ಷಿ. ಋಷಿಯು ಮಂತ್ರವನ್ನು ಆವಿಷ್ಕರಿಸುವ ಬಗೆಯನ್ನು ಈತನು ಹೀಗೆ ವರ್ಣಿಸುತ್ತಾನೆ : ''ತಪಸ್ಸನ್ನು ಆಚರಿಸುತ್ತಿರುವ ಋಷಿಗಳಿಗೆ ಮಂತ್ರವು ತಾನೇತಾನಾಗಿ ಗೋಚರವಾಗುತ್ತದೆ. ಆದ್ದರಿಂದಲೇ ಅವರು ಋಷಿಗಳು ಎಂದು ಕರೆಯಲ್ಪಡುತ್ತಾರೆ.'' ಇಲ್ಲಿ ಋಷಿಗಳು ಗೈಯುವ ತಪಸ್ಸಿಗೆ ಮಹತ್ವವನ್ನು ನೀಡಿರುವುದನ್ನು ಕಾಣಬಹುದು. ಶೌನಕನೆಂಬುವವನು ತನ್ನ ಬೃಹದ್ದೇವತಾ ಎಂಬ ಗ್ರಂಥದಲ್ಲಿ ಯಾಸ್ಕಾಚಾರ್ಯನ ಅಭಿಪ್ರಾಯವನ್ನು ಸಮರ್ಥಿಸುತ್ತಾನೆ: **ನ ಪ್ರತ್ಯಕ್ಷಮ್ ಅನೃಷೀಣಾಮ್ ಅಸ್ತಿ ಮಂತ್ರಮ್** — ಋಷಿಗಳಲ್ಲದವರಿಗೆ ಮಂತ್ರವು ಗೋಚರವಾಗುವುದಿಲ್ಲ. ಇದಲ್ಲದೆ ಶೌನಕನು ಮುಂದುವರೆದು ಹೀಗೆ ಹೇಳುತ್ತಾನೆ: ಋಷಿಯು ದೇವತೆಗಳನ್ನು ನೋಡುತ್ತಾನೆ; ಋಷಿಯು ವೇದಮಂತ್ರಗಳನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಮಂತ್ರಗಳನ್ನು ಅವನು ಕಂಡುಕೊಳ್ಳುವುದು ಯೋಗದಿಂದ. ಯೋಗವೆಂದರೆ ಸ್ವನಿಯಂತ್ರಣ ಮತ್ತು ನಿಯಮಬದ್ಧ ಶಿಸ್ತಿನ ಜೀವನವಿಧಾನ ಮತ್ತು ಧ್ಯಾನಪದ್ಧತಿ. ಇದಲ್ಲದೆ ಆಳವಾದ ಪರಿಜ್ಞಾನ, ಸಾಮಾನ್ಯ ತಿಳಿವಳಿಕೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ತಪಸ್ಯೆಯ ಆಚರಣೆ — ಇವು ಒಬ್ಬನನ್ನು ಋಷಿಯನ್ನಾಗಿ ರೂಪಿಸುತ್ತವೆ.

ಒಟ್ಟಾರೆ ಋಷಿಯು ಸತ್ಯವನ್ನು ಆಂತರಿಕವಾಗಿ ಸಾಕ್ಷಾತ್ಕರಿಸಿಕೊಂಡ ಮಹಾವ್ಯಕ್ತಿ. ಇಡೀ ಜಗತ್ತನ್ನು ಆ ಪರಮಸತ್ಯದ ಮೂರ್ತ ರೂಪವಾಗಿ, ಸಂಕೇತವೆಂಬಂತೆ ಕಾಣಬಲ್ಲ, ಅನುಭವಿಸಬಲ್ಲ ಮಹಾನ್ ಸಾಮರ್ಥ್ಯ ಅವನಲ್ಲಿ ಒಡಮೂಡಿರುತ್ತದೆ. ಋಷಿಗಳು ತಮ್ಮ ಜೀವನದ ಬಹುಭಾಗವನ್ನು ಧ್ಯಾನ ಮತ್ತು ಸ್ವಾಧ್ಯಾಯಗಳಿಗೆ ಮೀಸಲಿಡುತ್ತಾರೆ. **ಸರ್ವಭೂತಹಿತೇ ರತಾಃ** — ಎಲ್ಲ ಜೀವಿಗಳಿಗೂ ಹಿತವನ್ನು ಬಯಸುವುದರಲ್ಲಿಯೇ ತೊಡಗಿರುವವರು ಎಂಬ ಭಗವದ್ಗೀತೆಯ ಆದರ್ಶವನ್ನು ತಮ್ಮ ಜೀವನದಲ್ಲಿ ಯಥಾವತ್ತಾಗಿ ತಂದುಕೊಂಡವರು ಅವರು. ಹೀಗಾಗಿ ಅವರು ಸಮಾಜದ ಎಲ್ಲ ವರ್ಗದ ಜನರ ಹಿತೈಷಿಗಳಾಗಿರುತ್ತಾರೆ. ಈ ಮಾತಿನ ಅರ್ಥವನ್ನು ಚೆನ್ನಾಗಿ ತಿಳಿಯಬೇಕಾದರೆ, ನಾವು ಮತ್ತೆ ಮಹರ್ಷಿ ಅರವಿಂದರು ಋಷಿಗಳ ಬಗ್ಗೆ ಬರೆದ ಮಾತುಗಳನ್ನು ಅನುಸಂಧಾನ ಮಾಡಬೇಕಾಗುತ್ತದೆ. ಅವರ ಪ್ರಭಾವಶಾಲಿ ನುಡಿಗಳು ಹೀಗಿವೆ:

''ನಮ್ಮದು ಸನಾತನ ಭೂಮಿ, ನಾವೆಲ್ಲರೂ ಸನಾತನ ಜನಾಂಗವಾಗಿದ್ದೇವೆ. ನಮ್ಮದು ಸನಾತನ ಧರ್ಮ. ಇದರ ಶಕ್ತಿ, ಮಹಾನತೆ ಮತ್ತು ಪವಿತ್ರತೆಗಳಿಗೆ ಮುಸುಕು ಆವರಿಸಿರಬಹುದು. ಆದರೆ ಎಂದಿಗೂ, ಒಂದು ಕ್ಷಣಕ್ಕೂ ಅವುಗಳು ನಾಶವಾಗವು. ಋಷಿಗಳು ಅಥವಾ ಸಂತರು ನಮ್ಮ ಭರತಭೂಮಿಯ ಮಣ್ಣಿನ ನೈಸರ್ಗಿಕ ಫಲರೂಪವಾಗಿದ್ದಾರೆ. ಅವರೇ ನಮ್ಮ ಜನಾಂಗದ ನೈಜ ಧೀರೋದಾತ್ತರು. ಅವರು ಹುಟ್ಟಬರದ ಕಾಲಾವಧಿಯು ಇಲ್ಲವೇ ಇಲ್ಲವೆಂದು ಹೇಳಬಹುದು... ಋಷಿಗಳು ಬರಿಯ ಸಂತರಲ್ಲ. ಅವರಿಗಿಂತ ಭಿನ್ನರಾದವರು. ಆದರ್ಶ ಸೌಂದರ್ಯದಿಂದ ಕೂಡಿದ ಹೊರಗಿನ ಪವಿತ್ರತೆಯ ಲಾಂಛನಗಳಿಂದಾಗಲಿ ಅಥವಾ ನಡವಳಿಕೆಯಿಂದಾಗಲಿ ಅವರು ಕೂಡಿರದೇ ಇರಬಹುದು. ಅವರು ತಮ್ಮ ಮಟ್ಟಿಗೆ ಮಹಾನ್ ವ್ಯಕ್ತಿಗಳಾಗದೆ ಇರಬಹುದು, ಆದರೆ ಅವರಿಂದ ವ್ಯಕ್ತಗೊಂಡ ಸಂದೇಶವು ಅವರನ್ನು ಅಸಾಧಾರಣ ವ್ಯಕ್ತಿಗಳನ್ನಾಗಿಸಿದೆ. ಅತ್ಯಂತ ಉದಾತ್ತವಾದ ಮತ್ತು ಪುನುರುಜ್ಜೀವನಗೊಳಿಸುವ ಸಂದೇಶವನ್ನು ಅವರು ಇಡೀ ಮಾನವತೆಗೆ ಮತ್ತು ನಮ್ಮ ದೇಶಕ್ಕೆ ನೀಡಿದ್ದಾರೆ. ಆ ಸಂದೇಶವನ್ನು ಅವರು ದಿವ್ಯ ಆಕರದಿಂದ ಸ್ವೀಕರಿಸಿದರು. ಆ ದರ್ಶನಗಳು ದಿವ್ಯ ಸ್ತರದಿಂದಲೇ ಅವರಿಗೆ ನೀಡಲ್ಪಟ್ಟವು. ಪರಮಾತ್ಮನು ಅವರ ಮಾತುಗಳನ್ನು ತನ್ನ ಸಂದೇಶದ ವಾಹಕಗಳನ್ನಾಗಿ ಮಾಡಿಕೊಂಡಿದ್ದಾನೆ. ಈ ಸಂದರ್ಭವು ಅದ್ಭುತವಾದುದು; ಆಗಲೇ ಪರಮಾತ್ಮನು ಋಷಿಯ ಕಣ್ಣುಗಳನ್ನು ದಿವ್ಯದರ್ಶನಕ್ಕಾಗಿ ಅನಾವರಣಗೊಳಿಸುತ್ತಾನೆ. ಈ ವಚನಗಳನ್ನು ಋಷಿಯು ತನ್ನೆಲ್ಲ ಶಕ್ತಿ ಸಾಮರ್ಥ್ಯದಿಂದ ಅಖಂಡ ವಿಶ್ವಕ್ಕೆ ಸಾರಿ ಹೇಳುತ್ತಾನೆ. ಆ ಮಾತುಗಳು, ಕೇಳುಗನಲ್ಲಿ ಸ್ಫೂರ್ತಿಯ ಚಿಲುಮೆಯನ್ನು ಹೊಮ್ಮಿಸುವ ಮಹೋತ್ತಮವಾದ ಗಳಿಗೆಯನ್ನುಂಟುಮಾಡುತ್ತವೆ. ಶ್ರೋತೃಗಳ ಗಭೀರ ಅಂತಃಕರಣವನ್ನು ಮಿಡಿಯುತ್ತವೆ; ಅವರ ಮನಸ್ಸುಗಳನ್ನು ಪರಿಶುದ್ಧಗೊಳಿಸುತ್ತವೆ; ಅವರ ಹೃದಯಗಳನ್ನು ಸೂರೆಗೊಂಡು, ಸಾಧಾರಣ ಸಂದರ್ಭಗಳಲ್ಲಿ ಅಸಾಧ್ಯವಾದ ಅದ್ಭುತ ಕಾರ್ಯಗಳನ್ನು ಎಸಗುವುದಕ್ಕೆ ಪ್ರೇರೇಪಣೆಯನ್ನು ನೀಡುತ್ತವೆ. ಋಷಿಯು ಆಡಿದ ಈ ದಿವ್ಯ ವಚನಗಳೇ ಮಂತ್ರಗಳು ಎನ್ನಿಸಿಕೊಳ್ಳುತ್ತವೆ. ಇವುಗಳನ್ನು ಪ್ರಕಟಮಾಡಲೆಂದೇ ಋಷಿಯು ಹುಟ್ಟಿಬಂದಿರುವನು. ಅವುಗಳ ದ್ರಷ್ಟಾರನು ಕೂಡ ಅವನೇ ಆಗಿರುವನು.''

ನಾಲ್ಕು ವೇದಗಳಲ್ಲಿ ಋಷಿಗಳ ಅಭೂತಪೂರ್ವ ಕೊಡುಗೆಯನ್ನು ನಾವು ಕಾಣಬಹುದು. ಋಗ್ವೇದವು ವೇದಗಳಲ್ಲೆಲ್ಲ ಅತ್ಯಂತ ಪುರಾತನವಾದ ವೇದ. ಇದರ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಇದರಲ್ಲಿ ಹತ್ತು ಮಂಡಲಗಳಿವೆ. ಅವುಗಳಲ್ಲಿ ಮೊದಲನೆಯ ಹಾಗೂ ಕಡೆಯ ಮಂಡಲಗಳು ಹಲವಾರು ಋಷಿಗಳ ಅನುಭೂತಿಯಿಂದ ಮೂಡಿಬಂದವು. ಎರಡನೆಯ ಮಂಡಲದಿಂದ ಹಿಡಿದು ಒಂಬತ್ತನೆಯ ಮಂಡಲದವರೆಗೆ ಪ್ರತಿ

ಯೊಂದು ಮಂಡಲವೂ ಒಬ್ಬೊಬ್ಬ ಋಷಿಯಿಂದ ರಚಿತವಾಗಿದೆ. ಋಗ್ವೇದದ ಎರಡನೆಯ ಮಂಡಲವನ್ನು ಭೃಗು ಮಹರ್ಷಿಯ ವಂಶದವರು ರಚಿಸಿದ್ದರೆ, ಮೂರನೆಯ ಹಾಗೂ ನಾಲ್ಕನೆಯ ಮಂಡಲಗಳನ್ನು ಕ್ರಮವಾಗಿ ವಿಶ್ವಾಮಿತ್ರ ಮತ್ತು ಗೌತಮ ಮುನಿಯ ವಂಶದವರು ರಚಿಸಿದ್ದಾರೆ. ಹೀಗೆ ಪ್ರತಿಯೊಂದು ಮಂಡಲವೂ ಒಬ್ಬೊಬ್ಬ ಋಷಿಯ ವಂಶಸ್ಥರಿಂದ ರಚಿಸಲ್ಪಟ್ಟಿದೆ.

### ಋಷಿಗಳಲ್ಲಿ ವಿಭಾಗಗಳು

ಋಷಿಗಳಲ್ಲಿ ಎರಡು ವಿಭಾಗಗಳನ್ನು ನೋಡಬಹುದು : ಸಾಕ್ಷಾತ್ಕೃತಧರ್ಮರು ಮತ್ತು ಅಸಾಕ್ಷಾತ್ಕೃತ ಧರ್ಮರು. ತಮ್ಮ ತಪಸ್ಸಿನ ಬಲದಿಂದ ನೇರವಾಗಿ ಮಂತ್ರಶಕ್ತಿಯನ್ನು ಕಂಡುಕೊಂಡವರು ಸಾಕ್ಷಾತ್ಕೃತಧರ್ಮರು. ಈ ಮಹಾನ್ ಋಷಿಗಳ ಆದರ್ಶದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡು, ಮಂತ್ರಗಳ ಶಕ್ತಿಯನ್ನು ಆಳವಾಗಿ ಅನುಭವಿಸಿದವರು ಅಸಾಕ್ಷಾತ್‌ಕೃತ ಧರ್ಮರು. ಕಾಲಕ್ರಮೇಣ ಋಷಿ ಎಂಬ ಪದವನ್ನು ವ್ಯಾಪಕವಾಗಿ ಬಳಸಲು ಜನರು ಆರಂಭಿಸಿದರು. ಹೀಗಾಗಿ ಹಲವಾರು ರೀತಿಯ ಋಷಿಗಳನ್ನು ನಾವು ಶಾಸ್ತ್ರಗಳಲ್ಲಿ ಕಾಣುತ್ತೇವೆ: ಶ್ರುತರ್ಷಿ, ಕಾಂಡರ್ಷಿ, ತಪರ್ಷಿ, ಸತ್ಯರ್ಷಿ, ದೇವರ್ಷಿ, ಮಹರ್ಷಿ, ಪರಮರ್ಷಿ, ಬ್ರಹ್ಮರ್ಷಿ, ರಾಜರ್ಷಿ ಮತ್ತು ಜನರ್ಷಿ. ವೈದಿಕ ಋಷಿಗಳು ಮುಖ್ಯವಾಗಿ ಮಂತ್ರದ್ರಷ್ಟಾರರು; ಅನುಭಾವಿಗಳು. ಪೌರಾಣಿಕ ಋಷಿಗಳು ಪ್ರಮುಖವಾಗಿ ತತ್ತ್ವಬೋಧಕರು; ಗುರುಗಳು. ಪುರಾಣಗಳಲ್ಲಿ ವಿವಿಧ ರೀತಿಯ ಜೀವನಶೈಲಿಗಳನ್ನು ಪಾಲಿಸುತ್ತಿದ್ದ ಋಷಿಗಳನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖರಾದವರು ಇವರು: ಊರ್ಧ್ವರೇತಸರು (ಅವಿವಾಹಿತರು), ಗೃಹಸ್ಥಾಶ್ರಮಿಗಳು, ಆಶ್ರಮವಾಸಿಗಳು (ಆಶ್ರಮದಲ್ಲಿ ನೆಲೆಸಿರುವವರು), ಯಾಯಾವರರು (ಸಂಚಾರದಲ್ಲಿರುವವರು) ಮತ್ತು ಪುರೋಹಿತರು (ಪೂಜಾದಿ ಕಾರ್ಯಗಳನ್ನು ಮಾಡಿಸುವವರು), ಶಾಸ್ತ್ರಾಧ್ಯಾಪಕರು (ಶಾಸ್ತ್ರಬೋಧಕರು) ಶಸ್ತ್ರಾಧ್ಯಾಪಕರು (ಅಸ್ತ್ರ ವಿದ್ಯೆಯನ್ನು ಬೋಧಿಸುವವರು) ಮತ್ತು ಉಗ್ರತಪಸ್ವಿಗಳು.

ಅನೇಕ ಮಹಿಳೆಯರೂ ಕೂಡ ಋಷಿಗಳಾಗಿದ್ದುದು ಕಂಡು ಬರುತ್ತದೆ. ಅವರನ್ನು ಋಷಿಕಾ ಎಂದು ಕರೆಯುತ್ತಿದ್ದರು. ವೈದಿಕ ವಾಙ್ಮಯದಲ್ಲಿ ಇಂಥ ಉದಾತ್ತ ಸ್ತ್ರೀಯರ ಪ್ರಸ್ತಾಪ ಹಲವಾರು ಕಡೆ ಬರುತ್ತದೆ. ಋಗ್ವೇದದಲ್ಲಿಯೇ ೨೧ ಜನ ಋಷೀಕೆಯರ ಹೆಸರುಗಳು ಕಂಡುಬರುತ್ತವೆ. ಅಂಥವರಲ್ಲಿ ಕೆಲವರ ಹೆಸರುಗಳು ಹೀಗಿವೆ: ಭರದ್ವಾಜ ಋಷಿಯ ಮಗಳಾದ ಶ್ರುತವತೀ, ಶಾಂಡಿಲ್ಯ ಋಷಿಯ ಮಗಳಾದ ಶ್ರೀಮತೀ, ಸುಲಭಾ, ಗಾರ್ಗಿ, ಮೈತ್ರೇಯಿ, ಅದಿತಿ, ಲೋಪಾಮುದ್ರಾ, ಘೋಷಾ ಮುಂತಾದವರು.

### ಗೃಹಸ್ಥ ಧರ್ಮ

ಋಷಿಗಳು ನಮಗೆ ತೋರಿಸಿದ ಗೃಹಸ್ಥ ಧರ್ಮದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಮೊದಲು, ಸಾಮಾನ್ಯರೀತಿಯಲ್ಲಿ ಗೃಹಸ್ಥಾಶ್ರಮವೆಂದರೇನು ಎನ್ನುವುದನ್ನು ಪರಿಚಯ ಮಾಡಿಕೊಳ್ಳುವುದು ಒಳಿತು. ವೈದಿಕ ವ್ಯವಸ್ಥೆಯ ಪ್ರಕಾರ, ಗೃಹಸ್ಥಾಶ್ರಮವು ಬ್ರಹ್ಮಚರ್ಯವನ್ನು ಪರಿಪಾಲಿಸಿದ ಅನಂತರ ಬರುವ ಜೀವನದ ಘಟ್ಟ. ಹಲವಾರು ಋಷಿಗಳು ಧರ್ಮಶಾಸ್ತ್ರಗಳಾದ ಸ್ಮೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗೃಹಸ್ಥನೆಂದರೆ ಯಾರು ಎಂದು ನಿಖರವಾಗಿ ವ್ಯಾಖ್ಯಾನ ಮಾಡಿದ್ದಾರೆ. ಬಹುತೇಕ ಸ್ಮೃತಿಕಾರರ ಪ್ರಕಾರ, ನಾಲ್ಕು ಆಶ್ರಮಗಳಿವೆ : ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ. ಆಶ್ರಮ ಎಂಬ ಪದವು ಶ್ರಮ ಎಂಬ ಧಾತುವಿನಿಂದ ಬಂದದ್ದು. ಇದರರ್ಥ ಶ್ರಮಪಡುವುದು, ಕಷ್ಟಪಟ್ಟು ದುಡಿಯುವುದು ಎಂದು. ಪ್ರತಿಯೊಂದು ಆಶ್ರಮಕ್ಕೂ ತನ್ನದೇ ಆದ ಆದರ್ಶವಿದೆ. ಅದನ್ನು ಸಾಕಾರಗೊಳಿಸಿಕೊಳ್ಳಲು ಪರಿಶ್ರಮಪಡಬೇಕು ಎನ್ನುವುದನ್ನು ಈ ಪದವು ಸೂಚಿಸುತ್ತದೆ.

ಈ ಆಶ್ರಮಗಳ ಪರಿಕಲ್ಪನೆಯನ್ನು ಮನುಧರ್ಮಶಾಸ್ತ್ರ ಅಥವಾ ಮನುಸ್ಮೃತಿಯ ಪ್ರಕಾರ ತಿಳಿದುಕೊಳ್ಳಲು ಯತ್ನಿಸೋಣ: ಮಾನವನ ಆಯುಸ್ಸು ಸಾಮಾನ್ಯವಾಗಿ ನೂರು ವರ್ಷಗಳು ಎಂದು ಪರಿಗಣಿತವಾಗಿದೆ (**ಶತುವರ್ೖ ಪುರುಷಃ**). ಇದು ಒಬ್ಬ ಮನುಷ್ಯನು ಬಾಳಲು ಇಚ್ಛಿಸುವ ಕಾಲಾವಧಿ. ಈ ನೂರು ವರ್ಷಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದಾಗ, ಒಂದೊಂದು ಭಾಗಕ್ಕೂ ೨೫ ವರ್ಷಗಳಾಗುತ್ತವೆ. ಇದರ ಮೊದಲ ಭಾಗವೇ ಬ್ರಹ್ಮಚರ್ಯ ಆಶ್ರಮ. ಇದರಲ್ಲಿ ಒಬ್ಬ ವ್ಯಕ್ತಿಯು ತನ್ನ ಗುರುಗಳ ಮನೆಯಲ್ಲಿ ಇದ್ದುಕೊಂಡು, ವೇದಾಧ್ಯಯನವನ್ನು ಮಾಡುತ್ತಾನೆ. ಎರಡನೆಯ ಭಾಗದ ಇಪ್ಪತ್ತೈದು ವರ್ಷಗಳಲ್ಲಿ ಮದುವೆಯಾಗಿ ಕೌಟುಂಬಿಕ ಜೀವನವನ್ನು ನಡೆಸುತ್ತಾನೆ. ಇದೇ ಗೃಹಸ್ಥ ಆಶ್ರಮ. ಆ ಕಾಲಾವಧಿಯಲ್ಲಿ ಅವನು ತನ್ನ ಪೂರ್ವಜರ ಋಣವನ್ನು ತೀರಿಸಬೇಕಾಗುತ್ತದೆ. ಇದನ್ನು ಪಿತೃಯಜ್ಞ ಎನ್ನುತ್ತಾರೆ. ಇದರಂತೆ ಅವನು ಮಕ್ಕಳನ್ನು ಪಡೆಯಬೇಕು. ಹಾಗೆಯೇ ಅವನು ಯಜ್ಞದ ಆಚರಣೆಯ ಮೂಲಕ ದೇವತೆಗಳನ್ನು ತುಷ್ಟಿಗೊಳಿಸಬೇಕು. ಇದು ಅವನ ಪ್ರಾಥಮಿಕ ಕರ್ತವ್ಯ. ಮುಂದಿನ ಇಪ್ಪತ್ತೈದು ವರ್ಷಗಳನ್ನು ಅವನು ಕಾಡಿನಲ್ಲಿ ಧ್ಯಾನಮಗ್ನನಾಗಿ ಕಳೆಯಬೇಕು. ಈ ಸ್ಥಿತಿಯನ್ನು ವಾನಪ್ರಸ್ಥಾಶ್ರಮ ಎಂದು ಕರೆಯುತ್ತಾರೆ. ಈ ಅವಧಿಯೂ ಮುಗಿದ ಮೇಲೆ ಅವನು ಸರ್ವಸಂಗ ವಿರಕ್ತನಾಗಿ ಸಂನ್ಯಾಸ ಜೀವನವನ್ನು ಅಪ್ಪಿಕೊಳ್ಳಬೇಕು.

ಈ ಆಶ್ರಮಗಳ ವಿಷಯದಲ್ಲಿ ಎರಡು ಅಭಿಪ್ರಾಯಗಳಿವೆ ಎಂದು ಡಾ. ಪಿ. ವಿ. ಕಾಣೆಯವರು **'ಧರ್ಮಶಾಸ್ತ್ರಗಳ ಇತಿಹಾಸ'** ಎಂಬ ತಮ್ಮ ಉದ್ಗ್ರಂಥದಲ್ಲಿ ಹೇಳುತ್ತಾರೆ. ಒಂದು ಸಮುಚ್ಚಯವಾದ; ಇನ್ನೊಂದು ವಿಕಲ್ಪವಾದ. ಸಮುಚ್ಚಯವಾದಿಗಳ ಪ್ರಕಾರ, ಈ ನಾಲ್ಕು ಆಶ್ರಮಗಳನ್ನೂ ಒಂದಾದರ ಮೇಲೊಂದು ಅಪ್ಪಿಕೊಳ್ಳಲೇಬೇಕು. ಅಂದರೆ, ಬ್ರಹ್ಮಚರ್ಯ ಜೀವನವನ್ನು ನಡೆಸಿದ ನಂತರ, ಗೃಹಸ್ಥಧರ್ಮ ಕಡ್ಡಾಯ. ಆದರೆ ವಿಕಲ್ಪವಾದಿಗಳ ಪ್ರಕಾರ, ಬ್ರಹ್ಮಚರ್ಯದ ಅವಧಿ ಮುಗಿದ ನಂತರ ನೇರವಾಗಿ

ಸಂನ್ಯಾಸಾಶ್ರಮವನ್ನು ಪ್ರವೇಶಿಸಬಹುದು. ಮೂರನೆಯ ಅಭಿಪ್ರಾಯವೂ ಇದೆ. ಅದರ ಅನುಯಾಯಿಗಳ ಪ್ರಕಾರ, ಇರುವುದು ಒಂದೇ ಆಶ್ರಮ, ಅದೆಂದರೆ ಗೃಹಸ್ಥಾಶ್ರಮ. ಏನೇ ಇರಲಿ, ಧರ್ಮಶಾಸ್ತ್ರಗಳು ಗೃಹಸ್ಥರ ಸ್ಥಿತಿಯನ್ನು ಬಹಳ ವೈಭವೀಕರಿಸಿವೆ ಎಂದು ಡಾ. ಪಿ.ವಿ. ಕಾಣೆ ಅಭಿಪ್ರಾಯ ಪಡುತ್ತಾರೆ. ಈ ದೃಷ್ಟಿಯಲ್ಲಿ ಧರ್ಮಶಾಸ್ತ್ರಗಳು ವಾನಪ್ರಸ್ಥ ಮತ್ತು ಸಂನ್ಯಾಸ ಆಶ್ರಮಗಳನ್ನು ಕಡೆಗಣಿಸಿ, ಗೃಹಸ್ಥ ಆಶ್ರಮಕ್ಕೇ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕಾಣುತ್ತೇವೆ.

ಇರುವುದು ಒಂದೇ ಆಶ್ರಮ ಎಂದು ವಾದಿಸುವುದನ್ನು ಬಾಧವಾದ ಎಂದು ಕರೆಯಲಾಗುತ್ತದೆ. ಇದರ ಪ್ರಕಾರ ಬ್ರಹ್ಮಚರ್ಯವು ಗೃಹಸ್ಥಾಶ್ರಮಕ್ಕೆ ಇರುವ ತರಬೇತಿ ಮಾತ್ರ. ಹಾಗೂ ಇತರ ಆಶ್ರಮದವರಿಗಿಂತ ಗೃಹಸ್ಥ ಆಶ್ರಮವೇ ಶ್ರೇಷ್ಠವಾದುದು. ಈ ವಾದವನ್ನು ಒಪ್ಪದ ಇತರ ಧರ್ಮಶಾಸ್ತ್ರಕಾರರು ಕೂಡ ಗೃಹಸ್ಥಾಶ್ರಮವನ್ನು ಬಹುವಾಗಿ ಹೊಗಳುತ್ತಾರೆ. ಉದಾಹರಣೆಗೆ ಬೋಧಾಯನ ಧರ್ಮಸೂತ್ರ ಮತ್ತು ಗೌತಮ ಧರ್ಮಸೂತ್ರಗಳು. ಇವುಗಳ ಪ್ರಕಾರ, ಪಂಚಋಣಗಳಲ್ಲಿ ಒಂದಾದ ಪಿತೃಋಣವನ್ನು ತೀರಿಸುವ ಒಂದೇ ಆಶ್ರಮವೆಂದರೆ ಗೃಹಸ್ಥಾಶ್ರಮ. ಮಕ್ಕಳನ್ನು ಪಡೆಯುವುದರಿಂದ, ಅದರಲ್ಲೂ ಮಗನನ್ನು ಪಡೆಯುವುದರಿಂದ ಮಾತ್ರವೇ ಪಿತೃಋಣವನ್ನು ತೀರಿಸಲು ಸಾಧ್ಯ ಎಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಇಷ್ಟು ಮಾತ್ರವಲ್ಲ, ಮನೆಯಲ್ಲಿನ ಅಗ್ನಿಗಳನ್ನು ಸದಾಕಾಲವೂ ಉಪಾಸನೆ ಮಾಡುವುದರಿಂದ ಮಾತ್ರವೇ ದೇವಋಣವನ್ನು ತೀರಿಸಬಹುದು ಎಂದು ಕೆಲವು ಧರ್ಮಶಾಸ್ತ್ರಗಳು ಅಭಿಪ್ರಾಯಪಡುತ್ತವೆ. ಹೀಗಾಗಿ ಗೃಹಸ್ಥನಾಗಿದ್ದುಕೊಂಡು, ಯಜ್ಞಯಾಗಾದಿಗಳನ್ನು ಗೈಯುವುದೇ ಶ್ರೇಷ್ಠವಾದ ಧರ್ಮವೆಂದು ಅವುಗಳ ಅಭಿಪ್ರಾಯ.

## ಸ್ಮೃತಿಗಳಲ್ಲಿ ಬೋಧಿಸಿದ ಗೃಹಸ್ಥ ಧರ್ಮ

ಋಷಿಗಳು ಬರೆದ ಧರ್ಮಶಾಸ್ತ್ರಗಳು ಅಥವಾ ಸ್ಮೃತಿಗಳ ಪ್ರಕಾರ, ಗೃಹಸ್ಥನೇ ಎಲ್ಲ ಇತರೆ ಆಶ್ರಮಗಳ ಪೋಷಕನಾಗಿರುತ್ತಾನೆ (ಗೌತಮ ಧರ್ಮಶಾಸ್ತ್ರ). ಮೋಕ್ಷವು ಗೃಹಸ್ಥರಿಗೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಕಪಿಲ ಋಷಿಯು ಖಂಡಿಸುತ್ತಾನೆ. ಋಷಿಗಳು ವಿವಾಹದ ವ್ಯವಸ್ಥೆಯನ್ನು ಪವಿತ್ರವೆಂದು ಪರಿಗಣಿಸಿದ್ದರು. ಹಲವಾರು ಸ್ಮೃತಿಗಳು ಆದರ್ಶ ಗೃಹಸ್ಥಧರ್ಮಕ್ಕೆ ಅನುಗುಣವಾಗಿ ಅನೇಕ ರೀತಿರಿವಾಜುಗಳನ್ನು ಮತ್ತು ನಿಬಂಧನೆಗಳನ್ನು ಕ್ರೋಡೀಕರಿಸಿವೆ. ಇವುಗಳ ಸಾರಾಂಶವನ್ನು ಕೂಡ ಇಲ್ಲಿ ನೀಡುವುದು ದುಸ್ಸಾಧ್ಯವೇ ಸರಿ. ಇದಕ್ಕೊಂದು ಉಪಾಯವಿದೆ. ಸ್ವಾಮಿ ವಿವೇಕಾನಂದರು ತಮ್ಮ ಕರ್ಮಯೋಗ ಪುಸ್ತಕದಲ್ಲಿ **'ಮಹಾನಿರ್ವಾಣ ತಂತ್ರ'** ಎಂಬ ಪುಸ್ತಕದಿಂದ ಗೃಹಸ್ಥರ ಕರ್ತವ್ಯಗಳ ಬಗ್ಗೆ ಹಲವು ಅತ್ಯುತ್ತಮವಾದ ಉಕ್ತಿಗಳನ್ನು ಉಲ್ಲೇಖಿಸಿದ್ದಾರೆ. ಅವುಗಳು ನಮ್ಮ ಋಷಿಗಳು ಗೃಹಸ್ಥಧರ್ಮದ ಬಗ್ಗೆ ನೀಡಿರುವ ಎಲ್ಲ ಉಪದೇಶಗಳ ಸಾರಸರ್ವಸ್ವವೂ ಆಗಿದೆ. ಅವುಗಳನ್ನು ಇಲ್ಲಿ ವಿಚಾರ ಮಾಡೋಣ.

ಸ್ವಾಮಿ ವಿವೇಕಾನಂದರು ಹೇಳುವ ಪ್ರಕಾರ, ಹಿಂದೂ ಶಾಸ್ತ್ರಗಳ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಕರ್ತವ್ಯಗಳನ್ನು ಹೊಂದಿರುತ್ತಾನೆ; ಆ ಕರ್ತವ್ಯಗಳು ಇಡೀ ವಿಶ್ವದ ಸಮಸ್ತ ಮಾನವತೆಯ ಆದರ್ಶಗಳಿಗೆ ಅನುಗುಣವಾಗಿವೆ. ಅವರು ಹೇಳುವಂತೆ, ಜೀವನದ ಪ್ರತಿಯೊಂದು ಘಟ್ಟದಲ್ಲಿಯೂ ವ್ಯಕ್ತಿಯೊಬ್ಬನ ಕರ್ತವ್ಯಗಳು (ವ್ಯಷ್ಟಿ ಧರ್ಮ), ಅಖಂಡ ವಿಶ್ವ ನಿಯಮಕ್ಕೆ (ಸಮಷ್ಟಿ ಧರ್ಮ) ಅನುಸಾರವಾಗಿಯೇ ಇರುತ್ತವೆ. ಇಲ್ಲಿ ಒಂದು ಬಹುಮುಖ್ಯವಾದ ಹೇಳಿಕೆಯನ್ನು ಸ್ವಾಮೀಜಿ ಮಾಡುತ್ತಾರೆ. ಅದೇನೆಂದರೆ, ಪ್ರತಿಯೊಬ್ಬ ವೈವಾಹಿಕ ವ್ಯಕ್ತಿಯ ಜೀವನವೂ ಧಾರ್ಮಿಕ ಜೀವನದಲ್ಲಿ ತೊಡಗಿಸಿಕೊಂಡ ಒಬ್ಬ ಸಂನ್ಯಾಸಿಯ ಜೀವನದಷ್ಟೇ ಅತ್ಯಂತ ಗುರುತರವಾದದ್ದು ಎನ್ನುವುದು. ಇದರರ್ಥ, ಅವನು ಸಂನ್ಯಾಸಿಯೇ ಆಗಿರಲಿ, ಗೃಹಸ್ಥನೇ ಆಗಿರಲಿ — ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ಥಾನದಲ್ಲಿ ಶ್ರೇಷ್ಠನೇ ಆಗಿರುತ್ತಾನೆ. ಪ್ರಾಪಂಚಿಕ ಜೀವನವನ್ನು ತ್ಯಾಗಮಾಡಿದ ಒಬ್ಬ ಮನುಷ್ಯನು ಪ್ರಪಂಚದ ಮಧ್ಯೆ ಇರುವ ವ್ಯಕ್ತಿಗಿಂತ ಹೆಚ್ಚಿನವನು ಎಂದು ಹೇಳುವುದೇ ನಿರರ್ಥಕವಾದುದು. ಸ್ವಾಮಿ ವಿವೇಕಾನಂದರ ಪ್ರಕಾರ, ಪ್ರಪಂಚದ ಮಧ್ಯದಲ್ಲಿ ಇದ್ದುಕೊಂಡು, ಭಗವಂತನನ್ನು ಪೂಜಿಸುವುದು ನಿಜವಾಗಲೂ, ಸಂನ್ಯಾಸ ಜೀವನಕ್ಕಿಂತಲೂ ಅತ್ಯಂತ ಕಷ್ಟಕರವಾದುದು, ಉತ್ತಮವಾದುದು. ಇದನ್ನು ಸ್ಪಷ್ಟೀಕರಿಸಲೆಂದು ಸ್ವಾಮೀಜಿ 'ಮಹಾನಿರ್ವಾಣ ತಂತ್ರ'ವೆಂಬ ಗ್ರಂಥದಿಂದ ಗೃಹಸ್ಥನ ಕರ್ತವ್ಯಗಳ ಬಗ್ಗೆ ಬಹುವಾಗಿ ಉದ್ಧರಿಸುತ್ತಾರೆ. ಅವುಗಳಲ್ಲಿ ಕೆಲವು ಮುಖ್ಯ ಅಂಶಗಳನ್ನು ನೋಡೋಣ:

**ಭಗವದ್ಭಕ್ತಿ:** ಗೃಹಸ್ಥನು ಭಗವಂತನಲ್ಲಿ ಭಕ್ತಿಯನ್ನು ಹೊಂದಿರಬೇಕು. ಭಗವಂತನ ಜ್ಞಾನವೇ ಅವನ ಜೀವನದ ಉದ್ದೇಶವಾಗಿರಬೇಕು. ಹೀಗಿದ್ದೂ ಅವನು ತನ್ನ ಎಲ್ಲ ಕರ್ತವ್ಯಗಳನ್ನೂ ನಿಷ್ಠೆಯಿಂದ ಆಚರಿಸಬೇಕು. ತನ್ನೆಲ್ಲ ಕರ್ತವ್ಯಗಳ ಫಲವನ್ನೂ ಅವನು ಭಗವಂತನಿಗೆ ಸಮರ್ಪಿಸಬೇಕು.

**ಕುಟುಂಬ ನಿರ್ವಹಣೆ :** ಗೃಹಸ್ಥನ ಬಹುಮುಖ್ಯ ಕರ್ತವ್ಯವೆಂದರೆ ಕುಟುಂಬವನ್ನು ಮತ್ತು ತನ್ನ ಮೇಲೆ ನಿರ್ಭರರಾದವರನ್ನು ಪೋಷಿಸಲು ಧನಸಂಪಾದನೆ ಮಾಡುವುದು. ಈ ಕರ್ತವ್ಯವನ್ನು ನಿಭಾಯಿಸುವ ಸಮಯದಲ್ಲಿ ಅವನು ಸುಳ್ಳನ್ನು ಹೇಳಬಾರದು; ಯಾರಿಗೂ ಮೋಸವನ್ನು ಮಾಡಬಾರದು; ಯಾರ ಸ್ವತ್ತನ್ನೂ ಅಪಹರಿಸಬಾರದು. ತನ್ನ ಜೀವನವು ಭಗವಂತನ ಮತ್ತು ಬಡಜನರ ಸೇವೆಗಾಗಿಯೇ ಮುಡಿಪಾಗಿದೆಯೆಂದು ಅವನು ಎಂದಿಗೂ ಮರೆಯಬಾರದು.

**ತಂದೆತಾಯಿಗಳ ಸೇವೆ:** ತನ್ನ ತಂದೆತಾಯಿಗಳು ಭಗವಂತನ ಮೂರ್ತರೂಪರೆಂದು ಗೃಹಸ್ಥನು ಭಾವಿಸಬೇಕು. ಈ ಭಾವನೆಯಿಂದ, ಯಾವತ್ತೂ, ಎಲ್ಲ ರೀತಿಯಲ್ಲೂ ಅವರು ಸಂತೋಷವಾಗಿರುವಂತೆ ನೋಡಿಕೊಳ್ಳಬೇಕು. ತಂದೆತಾಯಿಗಳು ಪ್ರಸನ್ನ

ರಾದರೆ ಭಗವಂತನೂ ನಮ್ಮ ಮೇಲೆ ಪ್ರಸನ್ನನಾಗುತ್ತಾನೆ ಎನ್ನುವುದನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು. ತಂದೆತಾಯಿಗಳಿಗೆ ವಿಧೇಯನಾಗಿ ನಡೆದುಕೊಳ್ಳುವುದು, ಅವರ ಮುಂದೆ ವಿನಯದಿಂದ ಹಾಗೂ ಘನತೆಯಿಂದ ನಡೆದುಕೊಳ್ಳುವುದು ಪ್ರತಿಯೊಬ್ಬನ ಆದ್ಯ ಕರ್ತವ್ಯ.

**ಪತ್ನಿಯ ಕುರಿತು ಕರ್ತವ್ಯ :** ಗೃಹಸ್ಥನು ತನ್ನ ಹೆಂಡತಿಯನ್ನು ಎಂದಿಗೂ ಕಟುವಾಕ್ಯಗಳಿಂದ ನಿಂದಿಸಬಾರದು. ಆಕೆಯನ್ನು ತನ್ನ ತಾಯಿಯಂತೆಯೇ ಅತ್ಯಂತ ಗೌರವಾದರದಿಂದ ಕಾಣಬೇಕು. ತಾನು ಎಂಥ ಕಷ್ಟಗಳ, ದುಮ್ಮಾನಗಳ ನಡುವೆ ಇದ್ದರೂ ಕೂಡ, ಅವನು ಎಂದಿಗೂ ತನ್ನ ಪತ್ನಿಯ ಎದುರು ಕೋಪವನ್ನು ಪ್ರದರ್ಶಿಸಬಾರದು. ತನ್ನ ಪತ್ನಿಯನ್ನು ಬಿಟ್ಟು ಬೇರೆ ಯಾವ ಸ್ತ್ರೀಯನ್ನೂ – ಮನಸ್ಸಿನಲ್ಲಿಯೂ ಕೂಡ – ಮುಟ್ಟಬಾರದು. ಅಂಥವನು ರೌರವ ನರಕಕ್ಕೆ ಹೋಗುತ್ತಾನೆ. ತನಗೆ ಸಾಧ್ಯವಾದಷ್ಟು ಹಣ, ಬಟ್ಟೆಗಳನ್ನು ತನ್ನ ಪತ್ನಿಗೆ ಒದಗಿಸಿಕೊಟ್ಟು, ಅವಳನ್ನು ಪ್ರೀತಿ, ವಿಶ್ವಾಸಗಳಿಂದ ನೋಡಿಕೊಳ್ಳಬೇಕು. ಅವಳ ಹತ್ತಿರ ಯಾವತ್ತೂ ಮಧುರವಾದ ಮಾತುಗಳನ್ನೇ ಆಡಬೇಕು. ಹೀಗೆ ತನ್ನ ಪತ್ನಿಯ ಕುರಿತಾದ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವವನು ಧರ್ಮವಂತನಾಗುತ್ತಾನೆ; ಸದ್ಗುಣಸಂಪನ್ನನಾಗುತ್ತಾನೆ.

**ಮಕ್ಕಳ ಕುರಿತು ಕರ್ತವ್ಯ :** ನಾಲ್ಕು ವರ್ಷ ವಯಸ್ಸಾಗುವವರೆಗೆ ಮಕ್ಕಳನ್ನು ಬಹಳ ಪ್ರೀತಿಯಿಂದ ಕಾಪಾಡಿಕೊಳ್ಳಬೇಕು. ಅನಂತರ, ಹದಿನಾರನೆಯ ವಯಸ್ಸಿನವರೆಗೆ ಅವರಿಗೆ ಒಳ್ಳೆಯ ಶಿಕ್ಷಣವನ್ನು ನೀಡಬೇಕು. ಇಪ್ಪತ್ತನೆಯ ವಯಸ್ಸಾಗಿರುವಾಗ ಮಕ್ಕಳನ್ನು ಯಾವುದಾದರೂ ಒಂದು ಉದ್ಯೋಗದಲ್ಲಿ ತೊಡಗಿಸಬೇಕು. ಗಂಡುಮಕ್ಕಳು ಹೇಗೋ ಅದೇ ರೀತಿ ಹೆಣ್ಣುಮಕ್ಕಳನ್ನೂ ಸಮಾನವಾಗಿ ಬೆಳೆಸಬೇಕು. ಹೆಣ್ಣುಮಕ್ಕಳಿಗೂ ಉತ್ತಮ ಶಿಕ್ಷಣವನ್ನು ಒದಗಿಸಬೇಕು. ಇದರಂತೆ ಅವರಿಗೆ ಸಾಧ್ಯವಾದಷ್ಟು ಆಭರಣಗಳನ್ನು ಮತ್ತು ಧನಸಂಪತ್ತನ್ನು ನೀಡಬೇಕು.

**ಸಹೋದರ-ಸಹೋದರಿಯರು ಮತ್ತು ಸಂಬಂಧಿಕರನ್ನು ಕುರಿತು ಕರ್ತವ್ಯ :** ಗೃಹಸ್ಥನಿಗೆ ತನ್ನ ಕುಟುಂಬದ ಹೊರಗೂ ಅನೇಕ ಕರ್ತವ್ಯಗಳಿವೆ. ತನ್ನ ಸಹೋದರರು, ಸಹೋದರಿಯರು ಅಥವಾ ಇತರ ಬಂಧುಗಳು ಬಡವರಾಗಿದ್ದರೆ, ಅವರಿಗೆಲ್ಲರಿಗೂ ಸಾಧ್ಯವಾದಷ್ಟು ಸಹಾಯ ಮಾಡಬೇಕು. ಇದೇ ರೀತಿ, ತನ್ನ ಸ್ನೇಹಿತರು, ಸೇವಕರು, ತನ್ನ ಊರಿನ ಜನರು – ಇವರಿಗೂ ಕೂಡ ಗೃಹಸ್ಥನು ಶಕ್ತ್ಯನುಸಾರ ನೆರವಿಗೆ ನಿಲ್ಲಬೇಕು. ಹೀಗೆ ಮಾಡಲು ಅವನು ವಿಫಲನಾದರೆ, ಅವನು ಪ್ರಾಣಿಸಮಾನನೇ ಸರಿ.

**ಅನಾಸಕ್ತಿ ಭಾವ:** ಗೃಹಸ್ಥನು ಆಹಾರ, ಬಟ್ಟೆ, ದೇಹಪೋಷಣೆ, ಭರ್ಜರಿ ಪೋಷಾಕುಗಳು — ಇವುಗಳಲ್ಲಿ ವಿಪರೀತ ಆಸಕ್ತಿಯನ್ನು ಬೆಳೆಸಿಕೊಳ್ಳಬಾರದು. ಅವನು ತನ್ನ ಮನಸ್ಸನ್ನು ಮತ್ತು ದೇಹವನ್ನು ಪರಿಶುದ್ಧವನ್ನಾಗಿ ಇಟ್ಟುಕೊಳ್ಳಬೇಕು. ಯಾವತ್ತೂ ಅವನು ಕ್ರಿಯಾಶಾಲಿಯಾಗಿರಬೇಕು. ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳಲು ಸನ್ನದ್ಧನಾಗಿರಬೇಕು.

**ಧೀರ ಮನೋಭಾವ :** ಶತ್ರುಗಳ ವಿಷಯದಲ್ಲಿ ಗೃಹಸ್ಥನು ಬಹಳ ಧೀರನಾಗಿರಬೇಕು. ಖಂಡಿತವಾಗಲೂ ಅವನು ಅವರನ್ನು ವಿರೋಧಿಸಬೇಕು. ಕಷ್ಟನಷ್ಟಗಳ ಸಮಯದಲ್ಲಿ ಅವನು ಒಂದು ಮೂಲೆಯಲ್ಲಿ ಅಳುತ್ತ ಕೂಡಬಾರದು. ಇದೇ ಸಮಯದಲ್ಲಿ ತನ್ನ ಸ್ನೇಹಿತರ ಜೊತೆಗೆ ಅವನು ಬಹಳ ವಿನಯದಿಂದ ನಡೆದುಕೊಳ್ಳಬೇಕು. ದುಷ್ಟಜನರಿಗೆ ಅವನು ಗೌರವವನ್ನು ಎಳ್ಳಷ್ಟೂ ಕೊಡಬಾರದು. ಕಂಡಕಂಡವರೆನ್ನೆಲ್ಲ ಅವನು ಸ್ನೇಹಿತರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಬಾರದು. ಈ ವಿಷಯದಲ್ಲಿ ಅವನು ಬಹಳ ಜಾಗರೂಕತೆಯಿಂದ ನಡೆದುಕೊಳ್ಳಬೇಕು.

**ನಿರಹಂಕಾರ:** ಗೃಹಸ್ಥನು ತನ್ನ ಬಗ್ಗೆ ಇತರರ ಮುಂದೆ ಕೊಚ್ಚಿಕೊಳ್ಳಬಾರದು. ತನ್ನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಮತ್ತು ತನ್ನಲ್ಲಿರುವ ಸಂಪತ್ತಿನ ಬಗ್ಗೆ ಅನವಶ್ಯಕವಾಗಿ ಹೇಳಿಕೊಳ್ಳಬಾರದು. ಹಾಗೂ ಬೇರೆಯವರು ವಿಶ್ವಾಸದಿಂದ ಹೇಳಿದ ರಹಸ್ಯ ಸಂಗತಿಗಳನ್ನು ಅವನು ಬೇರಾರಲ್ಲೂ ಅನಾವರಣ ಮಾಡಬಾರದು.

**ಸಮಾಜದ ಆಧಾರಸ್ತಂಭ :** ಗೃಹಸ್ಥನು ಇಡಿಯ ಸಮಾಜದ ಆಧಾರಸ್ತಂಭನಾಗಿದ್ದಾನೆ. ಬಡವರು, ದುರ್ಬಲರು, ಮಕ್ಕಳು — ಎಲ್ಲರೂ ಅವನ ಮೇಲೆಯೇ ಅವಲಂಬಿಸಿದ್ದಾರೆ. ಹೀಗಾಗಿ ಅವನು ಎಲ್ಲ ಸಮಯದಲ್ಲಿಯೂ ಶಕ್ತಿಯನ್ನೇ ಪರಿಭಾವಿಸಬೇಕು. ಅವನು ಸಕಾರಾತ್ಮಕ ಧೋರಣೆಯನ್ನು ಹೊಂದಿರಬೇಕು. ತಾನು ಆದರ್ಶಜೀವನವನ್ನು ನಡೆಸುತ್ತಿರುವೆನೆಂಬ ಆತ್ಮವಿಶ್ವಾಸ ಅವನಲ್ಲಿ ತುಂಬಿತುಳುಕಾಡುತ್ತಿರಬೇಕು. ತಾನು ಮಾಡಿದ ತಪ್ಪನ್ನು ಅಥವಾ ತನ್ನ ಯಾವುದೇ ನ್ಯೂನತೆಯನ್ನು ಅವನು ಎಲ್ಲರ ಮುಂದೆ ಹೇಳಿಕೊಳ್ಳಬಾರದು.

**ನೈತಿಕ ಜೀವನ :** ಗೃಹಸ್ಥನಾದವನು ಪರಿಪೂರ್ಣ ನೈತಿಕ ಜೀವನ ನಡೆಸಬೇಕು. ಅವನು ಯಾರಿಗೂ ಮೋಸಮಾಡಬಾರದು. ಯಾವುದೇ ಕೆಲಸದ ಸಿದ್ಧಿಗಿಂತಲೂ, ಆ ಕೆಲಸವನ್ನು ಮಾಡುವ ವಿಧಾನ ಮುಖ್ಯವಾದುದು. ಹಾಗೆಯೇ ಕಾಲದ ಪರಿಸ್ಥಿತಿಯನ್ನೂ ಇಲ್ಲಿ ಗಣನೆಗೆ ತಂದುಕೊಳ್ಳಬೇಕು. ಕೆಲವೊಮ್ಮೆ ನಾವು ಮಾಡುವ ಕೆಲಸಗಳಲ್ಲಿ ಯಶಸ್ಸು ಸಿಗದಿರಬಹುದು. ಇನ್ನೊಮ್ಮೆ ಅಭೂತಪೂರ್ವ ಯಶಸ್ಸನ್ನು ನಾವು ಗಳಿಸಬಹುದು. ಇವೆರಡನ್ನೂ ಸಮಾನವಾಗಿ ಸ್ವೀಕರಿಸಬೇಕು. ಗೃಹಸ್ಥನಾದವನು ಮಾತನಾಡುವಾಗ ಬಹಳ ಮೃದುವಾಗಿ ಮಾತನಾಡಬೇಕು. ಬೇರೆಯವರ ವ್ಯವಹಾರದ ಬಗ್ಗೆ ಅನವಶ್ಯಕವಾಗಿ ಮಾತನಾಡಬಾರದು.

**ಪರೋಪಕಾರ ಭಾವನೆ :** ಗೃಹಸ್ಥನಾದವನು ಪರೋಪಕಾರಿಯಾಗಿರಬೇಕು. ಕೆರೆಕಟ್ಟೆಗಳನ್ನು ತೋಡಿಸಬೇಕು. ಮರಗಳನ್ನು ರಸ್ತೆಬದಿಯಲ್ಲಿ ನೆಡಬೇಕು. ಅನಾಥ ಮನುಷ್ಯರು ಮತ್ತು ಪ್ರಾಣಿಗಳಿಗೆ ಆಶ್ರಯಗೃಹಗಳನ್ನು ಸ್ಥಾಪಿಸಬೇಕು. ರಸ್ತೆಗಳನ್ನು ಮತ್ತು ಸೇತುವೆಗಳನ್ನು ನಿರ್ಮಾಣ ಮಾಡಬೇಕು.

ಮೇಲಿನ ಎಲ್ಲ ಗುಣಗಳು ಒಬ್ಬ ಗೃಹಸ್ಥನನ್ನು ಯೋಗಿಯನ್ನಾಗಿ ಪರಿವರ್ತಿಸುತ್ತದೆ. ಒಟ್ಟಾರೆ ಒಬ್ಬ ಗೃಹಸ್ಥನು ಕರ್ಮಯೋಗಿಯಾಗಬೇಕು. ಇದೇ ನಿಜವಾದ ಗೃಹಸ್ಥಧರ್ಮ.

### ಋಷಿ ಆದರ್ಶ

ಹಿಂದಿನ ಕಾಲದಲ್ಲಿ ಬಹುತೇಕ ಋಷಿಗಳು ಗೃಹಸ್ಥರಾಗಿದ್ದರು ಎನ್ನುವುದು ನಮಗೆ ತಿಳಿದುಬರುತ್ತದೆ. ಅದರಲ್ಲೂ ಛಾಂದೋಗ್ಯ ಉಪನಿಷತ್ತಿನಲ್ಲಿ ಕೆಲವು ರೀತಿಯ ಉಪಾಸನಾ ವಿಧಾನಗಳು ಕ್ಷತ್ರಿಯರ ಸ್ವತ್ತಾಗಿತ್ತು ಎಂದು ಒಬ್ಬ ರಾಜರ್ಷಿಯೇ ಘೋಷಿಸುತ್ತಾನೆ. ಈ ಋಷಿ ಆದರ್ಶವನ್ನು ಸ್ವಾಮಿ ವಿವೇಕಾನಂದರು ಬಹುವಾಗಿ ಪ್ರಶಂಸಿಸುತ್ತಾರೆ. ಈ ಋಷಿ ಆದರ್ಶವು ಯಾವುದೇ ಕಾಲ, ಯಾವುದೇ ವಯೋಮಾನ, ಜಾತಿ ಮತ್ತು ಪಂಗಡಗಳಿಗೆ ಸೀಮಿತವಾಗಿಲ್ಲ. ಸ್ವಾಮೀಜಿ ಹೇಳುತ್ತಾರೆ: ''ನೀವು, ನಾನು, ಎಲ್ಲರೂ ಕೂಡ – ಋಷಿಗಳಾಗುವುದಕ್ಕೇ ಹುಟ್ಟಿದವರು. ನಾವು ನಮ್ಮಲ್ಲಿ ಶ್ರದ್ಧೆಯನ್ನು ಇಟ್ಟುಕೊಳ್ಳಬೇಕು. ನಾವು ಜಗತ್ತನ್ನೇ ಕಂಪನಗೊಳಿಸುವ ಮಹಾಧೀರರಾಗಬೇಕು.'' ಇಂಥ ಋಷಿ ಆದರ್ಶವನ್ನು ಗೃಹಸ್ಥ ಜೀವನದಲ್ಲಿಯೂ ಅನುಷ್ಠಾನ ಮಾಡಬೇಕು. ಇದೇ ಋಷಿಗಳು ನಮಗೆ ಬೋಧಿಸುವ ಗೃಹಸ್ಥಧರ್ಮ.

ಆಧುನಿಕ ಕಾಲದಲ್ಲಿ ಗೃಹಸ್ಥಾಶ್ರಮದಲ್ಲಿ ಋಷಿ ಆದರ್ಶ ವನ್ನು ಬಾಳಿ ಬದುಕಿ ತೋರಿಸಿದ ಮಹಾನುಭಾವರೆಂದರೆ ಶ್ರೀರಾಮಕೃಷ್ಣರು. ಶ್ರೀರಾಮಕೃಷ್ಣರು ನಿಜವಾದ ಅರ್ಥದಲ್ಲಿ ಸಂನ್ಯಾಸಿಗಳು. ಹಾಗೆಯೇ ಆದರ್ಶ ಸಂಸಾರಿಗಳು ಕೂಡ. ಇದೇ ಋಷಿ ಆದರ್ಶ. ಸ್ವಾಮಿ ಭಜನಾನಂದಜಿ ಅವರು ಹೇಳುವ ಪ್ರಕಾರ, ಶ್ರೀರಾಮಕೃಷ್ಣರು ಸಂನ್ಯಾಸ ಧರ್ಮವನ್ನೂ ಗೃಹಸ್ಥಧರ್ಮವನ್ನೂ ತಮ್ಮ ಜೀವನದಲ್ಲಿ ಸಮನ್ವಯಗೊಳಿಸಿದರು. ಈ ಬಗೆಯ ಸಮನ್ವಯದ ಮೂಲಕ ಅವರು ಆಧುನಿಕ ಕಾಲದಲ್ಲಿ ನೂತನ ಋಷಿ ಆದರ್ಶವನ್ನು ಅನಾವರಣಗೊಳಿಸಿದರು. ಈ ರೀತಿಯಲ್ಲಿ ಅವರು ಈ ಯುಗದ ಆಧ್ಯಾತ್ಮಿಕ ಸಾಧಕರಿಗೆ ಹೊಸ ಮಾರ್ಗವೊಂದನ್ನು ಹಾಕಿಕೊಟ್ಟಿದ್ದಾರೆ ಎನ್ನಬೇಕು. ಶ್ರೀರಾಮಕೃಷ್ಣರು ಜಗತ್ತಿನ ಆಧ್ಯಾತ್ಮಿಕ ಪ್ರಪಂಚಕ್ಕೆ ನೀಡಿರುವ ಒಂದು ಮಹಾನ್ ಕೊಡುಗೆ ಇದು.

ಸ್ವಾಮಿ ವಿವೇಕಾನಂದರು ಪ್ರಚಂಡ ಆಶಾವಾದಿಗಳು. ಶ್ರೀರಾಮಕೃಷ್ಣರು ವರ್ತಮಾನ ಕಾಲದ ಸರ್ವಶ್ರೇಷ್ಠ ಋಷಿಗಳು. ಇನ್ನು ಮುಂದೆಯೂ ಅನೇಕ ಋಷಿಗಳು ಹುಟ್ಟಿಬರುತ್ತಾರೆ ಎಂದು ಅವರು ಭವಿಷ್ಯ ನುಡಿಯುತ್ತಾರೆ. ಅವರ ನುಡಿಗಳು ನಮ್ಮ ಈ ಅಧ್ಯಯನಕ್ಕೆ ಉತ್ತಮ ಅಂತ್ಯವಾಗಬಲ್ಲವು:

''ಪ್ರಾಚೀನ ಭಾರತದಲ್ಲಿ ನೂರಾರು ಋಷಿಗಳು ಇದ್ದರು. ನಾವು ಲಕ್ಷಗಟ್ಟಲೆ ಋಷಿಗಳನ್ನು ಭವಿಷ್ಯದಲ್ಲಿ ಹೊಂದುತ್ತೇವೆ. ಅಷ್ಟೇ ಅಲ್ಲ, ನಮ್ಮಲ್ಲಿ ಪ್ರತಿಯೊಬ್ಬರೂ ಋಷಿಗಳಾಗುತ್ತೇವೆ, ಋಷಿಗಳಾಗಬೇಕು – ಇದು ಎಷ್ಟು ಬೇಗ ಸಾಧ್ಯವಾಗುವುದೋ, ಭಾರತಕ್ಕೂ, ಇಡೀ ಪ್ರಪಂಚಕ್ಕೂ ಅಷ್ಟು ಒಳ್ಳೆಯದು.

